**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಮಲ್ಲಪ್ಪ | ಪ್ರಾಸಾಃ 4 |
| ತಂದೆ/ಗಂಡನ ಹೆಸರುಃ | ಸಿದ್ರಾಮಪ್ಪ | ಚಾಸಾಃ 2 |
| ವಯಸ್ಸು ಃ | 40 ವರ್ಷ | ದಿಃ 14-07-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 3 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ಸುಮಾರು 3 ವರ್ಷದ ಹಿಂದೆ ಜಗಳವಾಗಿರುತ್ತದೆ. ಸದರಿ ಜಗಳವಾದ ನಂತರ ಪೊಲಿಸರು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರನೆ. ಸಾಕ್ಷಿಯು ಮು. ಮಾ. 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ ಬಿ ಇವರಿಂದ**

13 ನೇ ಆರೋಪಿತನ ತಂದೆ ನನ್ನ ತಂದೆಯ ಸಹೋದರ ಎಂದರೆ ಸರಿ. ಸದರಿ ಆರೋಪಿತರ ಮನೆ ಚಾಸಾಃ 1 ರವರ ಮನೆಯಿಂದ ದೂರ ಇದೆ ಎಂದರೆ ಸರಿ. ನನಗೆ ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇಲ್ಲ, ಸದರಿ ಚಾಸಾಃ 1 ವರ ಕೋರಿಕೆಯ ಮೇಲೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನನಗೆ ಮತ್ತು 13 ಹಾಗೂ 14 ನೇ ಆರೋಪಿತರ ನಡುವೆ ಜಗಳವಾಗಿರುತ್ತದೆ ಎಂದರೆ ಸರಿ. ಸದರಿ ಆರೋಪಿ ನಂಬರ 13 ಮತ್ತು 14 ನನ್ನ ವಿರುದ್ದ ದೂರನ್ನು ಸಲ್ಲಿರುವಾಗ ನ್ಯಾಯ ಪಂಚಾಯಿತಿ ಮಾಡಿ ಬಗೆಹರಿಸಿರುತ್ತೇವೆ ಎಂದರೆ ಸರಿ. ಸದರಿ ಮು. ಮಾ. 1 ರಿಂದ 3 ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ. ಸದರಿ ಮು. ಮಾ. 1 ರಿಂದ 3 ಬಡಿಗೆಗಳು ಇರುತ್ತವೆ.

ನಾನು 13 ಮತ್ತು 14 ನೇ ಆರೋಪಿತನ ಮೇಲೆ ದ್ವೇಷ ಇರುವುದರಿಂದ ನಾನು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಹಿ ಮಾಡಲು ಹೇಳಿರುತ್ತಾರೆ ಅದಕ್ಕಾಗಿ ನಾನು ಸಹಿ ಮಾಡಿರುತ್ತೇನೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಸಾಬಣ್ಣ | ಪ್ರಾಸಾಃ 5 |
| ತಂದೆ/ಗಂಡನ ಹೆಸರುಃ | ಸಿದ್ರಾಮಪ್ಪ | ಚಾಸಾಃ 3 |
| ವಯಸ್ಸು ಃ | 35 ವರ್ಷ | ದಿಃ 14-07-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 2 ರವರ ಪರಿಚಯವಿದೆ. ಚಾಸಾಃ 2 ರವರು ನನ್ನ ಅಣ್ಣನಾಗಬೇಕು. ನನಗೆ ಆರೋಪಿತರ ಪರಿಚಯವಿದೆ. ಸುಮಾರು 3 ವರ್ಷದ ಹಿಂದೆ ಜಗಳವಾಗಿರುತ್ತದೆ. 3 ದಿನದ ನಂತರ ಪೋಲಿಸರು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾನೆ. ಸಾಕ್ಷಿಯು ಮು. ಮಾ. 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ. ಬಿ. ಇವರಿಂದ**

13 ನೇ ಆರೋಪಿತನ ತಂದೆ ಮತ್ತು ನನ್ನ ತಂದೆ ಸಹೋದರರು ಎಂದರೆ ಸರಿ. ಚಾಸಾಃ 1 ಮತ್ತು 13, 14 ನೇ ಆರೋಪಿತರು ಮತ್ತು ನನ್ನ ಮನೆ ಹತ್ತಿರ ಇದೆ ಎಂದರೆ ಸರಿ. 1 ರಿಂದ 12 ರವರ ಆರೋಪಿತರ ಮನೆ ಬೇರೆ-ಬೇರೆ ಇದೆ ಎಂದರೆ ಸರಿ. 13 ಮತ್ತು 14 ನೇ ಆರೋಪಿತರು ಮತ್ತು ನಮ್ಮ ನಡುವೆ ಜಗಳವಾದಾಗ ನ್ಯಾಯ ಪಂಚಾಯಿತಿಯ ಮೂಲಕ ಬಗೆಹರಿಸಿಕೊಂಡಿರುತ್ತೇವೆ ಎಂದರೆ ಸರಿ. ಆ ವೈಮನಸ್ಸಿನಿಂದ ಚಾಸಾಃ 1 ರವರ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ಗುನ್ನೆ ಪಂಚನಾಮೆಗೆ ಪೋಲಿಸರು ಸಹಿ ಮಾಡಲು ಹೇಳಿರುತ್ತಾರೆ ಆದ್ದರಿಂದ ನಾನು ಸಹಿ ಮಾಡಿರುತ್ತೇನೆ ಅದರಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಸದರಿ ಮು. ಮಾ. 1 ರಿಂದ 3 ಹಳ್ಳಿಯಲ್ಲಿ ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**